	ತಾಲ್ಲೂಕಿನ ಹೆಸರು	ಸಿ.ಆರ್.ಎಫ್ ಅಡಿಯಲ್ಲಿ		ಉದ್ಯೋಗ ಭರವಸೆ ಯೋಜನೆ
		ಕಾಮಗಾರಿಗಳ ಸಂಖ್ಯೆ	ಅನುದಾನ	
1.	ಬಳ್ಳಾರಿ	8	8.00	50.00
2.	ಸಂಡೂರು	2	3.00	37.50
3.	ಸಿರಗುಪ್ಪ	3	3.00	37.50
4.	ಹೊಸಪೇಟೆ	8	8.00	37.50
5.	ಕೂಡ್ಲಿಗಿ	3	3.00	50.00
6.	ಹಡಗಲಿ	7	8.00	37.50
7.	ಹಗರಿಬೊಮ್ಮನಹಳ್ಳಿ	6	8.00	37.50
	ಒಟ್ಟು	37	41.00	287.50

ಉದ್ಯೋಗ ಭರವಸೆ ಯೋಜನೆಯಡಿ 6.288 ಲಕ್ಷಗಳ ಮಾನವ ದಿನಗಳನ್ನು ಸೃಜಿಸಲಾಗಿದೆ.

ವಿಷಯ: ತೀರ್ಥಹಳ್ಳಿ ತಾಲ್ಲೂಕಿನ ಇನಾಂ ಜಮೀನು ಮಂಜೂರಾತಿಗೆ ಅರ್ಜಿ.

1023 (1561)

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೀರ್ಥಹಳ್ಳಿ ತಾಲ್ಲೂಕಿನ ಇನಾಂ ಜಮೀನು ಮಂಜೂರಾತಿಗಾಗಿ ಅರ್ಜಿ ಸಲ್ಲಿಸಿದವರ ಸಂಖ್ಯೆ ಎಷ್ಟು?

ಆ) ಇದುವರೆಗೆ ಮಂಜಾರಾತಿ ನೀಡದೇ ಇರಲು ಕಾರಣವೇನು?

ಇ) ಮಂಜೂರಾತಿ ಅಧಿಕಾರ ತೀರ್ಥಹಳ್ಳಿ ಭೂನ್ಯಾಯಾಧಿಕರಣಕ್ಕೆ

ನೀಡಲಾಗುವುದೇ?

ಈ) ಹಾಗಿದ್ದಲ್ಲಿ, ಮಂಜೂರಾತಿಗೆ ಎಷ್ಟು ಸಮಯ ಬೇಕು?

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು):

ಅ) 5445.

ಆ) ಈಗಾಗಲೇ 4781 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ. 664 ಅರ್ಜಿಗಳು ವಿಲೇವಾರಿಗಾಗಿ ಬಾಕಿ ಇವೆ. ಪರ್ಸನಲ್ ಮತ್ತು ಮಿಸಲೇನಿಯಸ್ ಇನಾಂ ರದ್ದತಿ ಕಾಯಿದೆ 1954 ಮತ್ತು ಕರ್ನಾಟಕ ರಿಲೀಜಿಯನ್ ಮತ್ತು ಚಾರಿಟೆಬಲ್ ಇನಾಂ ರದ್ದತಿ ಕಾಯಿದೆ 1955 ಒಳಗಡೆ ಬರುವ ಇನಾಂ ಜಮೀನುಗಳ ಅಧಿಭೋಗದಾರಿಕೆ ಹಕ್ಕನ್ನು ಸರ್ವೋಚ್ಚ ನ್ಯಾಯಾಲಯದ ಎಸ್ಎಲ್ಪಿ ಸಂಖ್ಯೆ : 3246 - 47 : 93ರಂತೆ ತಕ್ಷಣ ವಿಲೇವಾರಿ ಮಾಡಲು ಜಿಲ್ಲಾಧಿಕಾರಿಗಳಿಗೆ ಸುತ್ತೋಲೆ ಸಂಖ್ಯೆ : ಕಂಇ 90 ಐಎಸ್ಎಂ 97 ದಿನಾಂಕ : 30-8-97ರಲ್ಲಿ ಆದೇಶಿಸಿದೆ.

ಇ) ಮೇಲಿನ ಕಾಯಿದೆಗಳನ್ವಯ ಮಂಜೂರಾತಿ ಅಧಿಕಾರ ತೀರ್ಥಹಳ್ಳಿ ಭೂ ನ್ಯಾಯಾಧಿಕರಣ ಈಗ ಇರುವುದಿಲ್ಲ.

ಈ) ತ್ವರಿತ ಗತಿಯಲ್ಲಿ ವಿಲೇ ಮಾಡಲು ಜಿಲ್ಲಾಧಿಕಾರಿಗಳಿಗೆ ದಿನಾಂಕ : 30-8-97ರಂದು ಸುತ್ತೋಲೆ ಮೂಲಕ ನಿರ್ದೇಶನ ನೀಡಲಾಗಿದೆ.

ವಿಷಯ: ತೀರ್ಥಹಳ್ಳಿಯಲ್ಲಿ ಮಿನಿವಿಧಾನಸೌಧ

1024 (1560)

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಒಟ್ಟು ಎಷ್ಟು ಮಿನಿ ವಿಧಾನಸೌಧ ಮಂಜೂರಾಗಿದೆ?

ಆ) ಇವುಗಳಲ್ಲಿ ಎಷ್ಟು ಪೂರ್ಣಗೊಂಡಿದೆ?

ಇ) ತೀರ್ಥಹಳ್ಳಿ ತಾಲ್ಲೂಕು ಮಿನಿ ವಿಧಾನಸೌಧಕ್ಕೆ ಎಷ್ಟು ಹಣ ಮಂಜೂರಾಗಿದೆ?

ಈ) ಇದುವರೆಗೆ ಇದಕ್ಕಾಗಿ ಖರ್ಚು ಮಾಡಿದ ಹಣ ಎಷ್ಟು?

ಉ) ಹಾಲಿ ಇರುವ ತಾಲ್ಲೂಕು ಕಛೇರಿ ಕಟ್ಟಡ ಶಿಥಿಲಾವಸ್ಥೆಯಲ್ಲಿರುವುದರಿಂದ ಕಛೇರಿ ಕೆಲಸಕ್ಕೆ ಮಳೆಗಾಲದಲ್ಲಿ ಅಡ್ಡಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ